ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

OFFICE OF THE DEPUTY COMMISSIONER, SHIVAMOGGA DISTRICT, SHIVAMOGGA.

PHONE: - 08182-271101/221010/222082: ಫ್ಯಾಕ್ಸ್/FAX: - 277082: ಇ-ಮೇಲ್/E-MAIL: - deo.shimoga@gmail.com

SMGDC-LND1/MISC/119/2023(ಇ-57833) ದಿನಾಂಕ:01-02-2023

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,

ರವರಿಗೆ,

ಮಾನ್ಯರೆ,

ವಿಷಯ:- ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ ಇಟ್ಟಿಗೆಹಳ್ಳಿ ಗ್ರಾಮದ ಹೊಸಕೆರೆ ನಿರ್ಮಾಣದ ಉದ್ದೇಶಕ್ಕೆ ಸ.ನಂ 20 ರಲ್ಲಿ 30.00 ಎಕರೆ ಜಾಗವು ಅರಣ್ಯ ಪ್ರದೇಶ ಭೂಮಿಯ ಬದಲಿಗೆ ಅರಣ್ಯೇತರ ಭೂಮಿಯನ್ನು ಹಸ್ತಾಂತರಿಸುವ ಕುರಿತು

ಉಲ್ಲೇಖ:-
1. ಮಾನ್ಯ ಸರ್ಕಾರದ ಪತ್ರ ಸಂಖ್ಯೆ:ಕಂಇ 9 ಎಲ್ ಜಿ ಎಸ್ 2021 ದಿನಾಂಕ:31.03.2021.
2. ಈ ಕಾರ್ಯಾಲಯದ ಸಮ ಸಂಖ್ಯೆ ಪತ್ರ SMG.DC.LND/MISC/119/2020 (E-57883), ದಿನಾಂಕ: 3.3.2023
3. ಉಪ ಅರಣ್ಯ ಸಂರಕ್ಷಣಾಧಿಕಾರಿ,ಭದ್ರಾವತಿ ವಿಭಾಗ, ಭದ್ರಾವತಿರವರ ಪತ್ರ ಸಂಖ್ಯೆ: ಬಿ2, ಭೂಮಿ ಸಿ ಆರ್ 21/2022-23, ದಿನಾಂಕ:27. 01.2023
4. ತಹಶೀಲ್ದಾರ್ ಭದ್ರಾವತಿ ಇವರ ಪತ್ರ ಸಂಖ್ಯೆ: TAHBDV-REVOTANK/78/2022(E-128085), ದಿನಾಂಕ: 19.12.2022, 17.1.2023.

*****

ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ ಇಟ್ಟಿಗೆಹಳ್ಳಿ ಗ್ರಾಮದ ಹೊಸಕೆರೆ ನಿರ್ಮಾಣದ ಉದ್ದೇಶಕ್ಕೆ ಸ.ನಂ 20 ರಲ್ಲಿ 30.00 ಎಕರೆ ಜಾಗವು ಅರಣ್ಯ ಪ್ರದೇಶ ಭೂಮಿಯ ಬದಲಿಗೆ ಅರಣ್ಯೇತರ ಭೂಮಿಯನ್ನು ಹಸ್ತಾಂತರಿಸುವ ಕುರಿತು ಉಲ್ಲೇಖ(2) ರಂತೆ ಈ ಕಾರ್ಯಾಲಯದಿಂದ ತಮ್ಮ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅದರಂತೆ ಉಲ್ಲೇಖ (1) ರ ಪತ್ರದಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯವನ್ನು ಪಡೆದು ಸಲ್ಲಿಸಲು ನಿರ್ದೇಶನ ನೀಡಲಾದಂತೆ ಉಲ್ಲೇಖ (3) ಮತ್ತು (4) ರಂತೆ ವರದಿಯನ್ನು ಪಡೆಯಲಾಗಿರುತ್ತದೆ.

ಈ ಕುರಿತು ಪರಿಶೀಲಿಸಲಾಗಿ 2022-23 ನೇ ಸಾಲಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು-2ನೇ ಹೋಬಳಿ ಗುಡಮಘಟ್ಟ ಗ್ರಾಮದ ಸ.ನಂ 43 ರಲ್ಲಿ ಒಟ್ಟು 765.33 ಎಕರೆ ಜಮೀನಿನ ಪೈಕಿ 112-00 ಎ ಖರಾಬು ಹೊರತುಪಡಿಸಿ 653.33 ಎಕರೆ ಜಮೀನಿರುತ್ತದೆ. ಪಹಣಿ ಕಾಲಂ 9 ರಲ್ಲಿ 206.34 ಎಕರೆ ಊರ ದನಗಳಿಗೆ ಮುಫತ್ತು, 300-00 ಎಕರೆ ಕಿರು ಅರಣ್ಯ ಮನ್ನಾ ಜಂಗ್ಲಿ ಎಂದು ದಾಖಲಾಗಿದ್ದು, ಉಳಿಕೆ ವಿಸ್ತೀರ್ಣ ಭೂ ಮಂಜೂರಾತಿಯಾಗಿರುವುದು ಕಂಡು ಬಂದಿರುತ್ತದೆ.

ಉಲ್ಲೇಖ(3) ರ ಪತ್ರದ ವರದಿಯಲ್ಲಿ ತಿಳಿಸಿರುವಂತೆ ಭದ್ರಾವತಿ ತಾಲ್ಲೂಕು ಹೊಳೆಹೊನ್ನುರು ಹೋಬಳಿ ಇಟ್ಟಿಗೆಹಳ್ಳಿ ಗ್ರಾಮದ ಸನಂ.17 (ಹೊಸ ಸನಂ.20) ರಲ್ಲಿ ಹೊಸಕೆರೆ ನಿರ್ಮಾಣದ ಉದ್ದೇಶಕ್ಕಾಗಿ ಆನ್ ಲೈನ್ ನಲ್ಲಿ ಪ್ರಸ್ತಾವನೆಯನ್ನು

Scanned with CamScanner

ಪಾರ್ಟ್-1 ರಲ್ಲಿ ಸಲ್ಲಿಸಿದ್ದು, ಗುಡುಮಘಟ್ಟ ಗ್ರಾಮದ ಸನಂ.43 (ಪಾರ್ಟ್) ರ ಪ್ರದೇಶವು ಯಾವುದೇ ಅಧಿಸೂಚಿತ ಅರಣ್ಯ ವ್ಯಾಪ್ತಿಗೆ ಹಾಗೂ ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಅರಣ್ಯ ಪ್ರದೇಶದ ಭೂಮಿಯ ಬದಲಿಗೆ ಕಂದಾಯ ಭೂಮಿಯಾದ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ ಗುಡುಮಘಟ್ಟ ಗ್ರಾಮದ ಸನಂ. 43 (ಪಾರ್ಟ್) ರ 12.1801 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಮ್ಯುಟೇಷನ್ ಮಾಡಿಕೊಡಬೇಕಾಗಿ ಕೋರಿರುತ್ತಾರೆ.

ಪ್ರಯುಕ್ತ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ ಇಟ್ಟಿಗೆಹಳ್ಳಿ ಗ್ರಾಮದ ಹೊಸಕೆರೆ ನಿರ್ಮಾಣದ ಉದ್ದೇಶಕ್ಕೆ ಸ.ನಂ 20 ರಲ್ಲಿ 30.00 ಎಕರೆ ಜಾಗವು ಅರಣ್ಯ ಪ್ರದೇಶ ಭೂಮಿಯ ಬದಲಿಗೆ ಅರಣ್ಯೇತರ ಭೂಮಿಯನ್ನು ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು 2 ನೇ ಹೋಬಳಿ ಗುಡುಮಗಟ್ಟ ಗ್ರಾಮ ಸ.ನಂ.43 ನ್ನು ಹಸ್ತಾಂತರಿಸುವ ಕುರಿತು ಅರಣ್ಯ ಇಲಾಖೆಯ ಅಭಿಪ್ರಾಯವನ್ನು ಈ ಪತ್ರದೊಂದಿಗೆ ಲಗತ್ತಿಸಿ ವಾಸ್ತಾವಾಂಶದ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

Scanned with CamScanner